## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 658 |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12.03.2025 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕೊಡಗು ಜಿಲ್ಲೆಯಲ್ಲಿ ಇರುವ ಪೈಸಾರಿ ಜಮೀನುಗಳ ಸಂಖ್ಯೆ ಎಷ್ಟು; (ಮಾಹಿತಿಗಳನ್ನು ಒದಗಿಸುವುದು)</td><td>ಕೊಡಗು ಜಿಲ್ಲೆಯಲ್ಲಿ ಒಟ್ಟು 1,77,426 ಎಕರೆ ಮತ್ತು 81 ಸೆಂಟ್ಸ್ ವಿಸ್ತೀರ್ಣದ ಸರ್ಕಾರಿ ಜಮೀನು ಇರುತ್ತದೆ.<br><br>ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:-
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ವಿಸ್ತೀರ್ಣ (ಎಕರೆ/ಸೆಂಟ್ಸ್)</th></tr>
<tr><td>1.</td><td>ಮಡಿಕೇರಿ</td><td>77018.3</td></tr>
<tr><td>2.</td><td>ವಿರಾಜಪೇಟೆ</td><td>14675.69</td></tr>
<tr><td>3.</td><td>ಪೊನ್ನಂಪೇಟೆ</td><td>12756.92</td></tr>
<tr><td>4.</td><td>ಸೋಮವಾರಪೇಟೆ</td><td>51946.51</td></tr>
<tr><td>5.</td><td>ಕುಶಾಲನಗರ</td><td>21029.39</td></tr>
</table></td></tr>
<tr><td>(ಆ)</td><td>ಸದರಿ ಪೈಸಾರಿ ಜಮೀನುಗಳನ್ನು ಭೂ ಮಂಜೂರಾತಿ ಕಾಯ್ದೆ ಅಡಿ ಸಂಬಂಧಿಸಿದವರಿಗೆ ಮಂಜೂರಾತಿ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿದೆಯೇ; ಈ ಪೈಸಾರಿ ಜಮೀನುಗಳನ್ನು ಮಂಜೂರಾತಿ ಮಾಡಿಕೊಳ್ಳಲು ಮನವಿಗಳನ್ನು ಸಲ್ಲಿಸಿರುವವರ ಸಂಖ್ಯೆ ಎಷ್ಟು; ಎಷ್ಟು ಪ್ರಸ್ತಾವನೆಗಳು ಕೊಡಗು ಜಿಲ್ಲೆಯಲ್ಲಿ ಬಂದಿವೆ; (ಮಾಹಿತಿ ನೀಡುವುದು)</td><td>ಪೈಸಾರಿ ಜಮೀನುಗಳಲ್ಲಿ ಒತ್ತುವರಿ ಮಾಡಿ ಸಾಗುವಳಿ ಮಾಡಿದ್ದಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94ಎ, 94ಬಿ, 94ಎ(4), ರಡಿ ಕಲ್ಪಿಸಿರುವ ಅವಕಾಶಗಳಂತೆ ಮಂಜೂರಾತಿಗೆ ಅವಕಾಶವಿರುತ್ತದೆ. ಈ ರೀತಿ ಭೂ ಮಂಜೂರಾತಿ ಕೋರಿ ಕೊಡಗು ಜಿಲ್ಲೆಯಲ್ಲಿ ಒಟ್ಟು 51,025 ಅರ್ಜಿಗಳು ಸ್ವೀಕೃತಿಯಾಗಿರುತ್ತವೆ. ಸದರಿ ಅರ್ಜಿಗಳ ಪೈಕಿ 9373 ಪ್ರಕರಣಗಳಲ್ಲಿ ಮಂಜೂರಾತಿಯಾಗಿರುತ್ತದೆ. 22152 ಅರ್ಜಿಗಳು ಅನರ್ಹತೆಯಿಂದಾಗಿ ತಿರಸ್ಕೃತವಾಗಿರುತ್ತವೆ. ಒಟ್ಟು 31525 ಅರ್ಜಿಗಳು ವಿಲೇಯಾಗಿದ್ದು, 19500 ಅರ್ಜಿಗಳು ಬಾಕಿಯಿರುತ್ತವೆ. ಬಾಕಿ ಇರುವ ಅರ್ಜಿಗಳನ್ನು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯಲ್ಲಿ ಮಂಡಿಸಿ ನಿಯಮಾನುಸಾರ ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತಿದೆ.<br>ಅನಧಿಕೃತ ಸಾಗುವಳಿ ಸಕ್ರಮ ಕೋರಿ ನಮೂನೆ 50, 53 ಮತ್ತು 57 ರಡಿ ಸ್ವೀಕೃತವಾದ ಅರ್ಜಿಗಳ ತಾಲ್ಲೂಕುವಾರು ಮಾಹಿತಿ ಈ ಕೆಳಗಿನಂತಿದೆ:-
<table>
<tr><th>ಕ್ರ. ಸಂ.</th><th>ತಾಲ್ಲೂಕು</th><th>ಸ್ವೀಕೃತ ಅರ್ಜಿಗಳು</th><th>ಸಕ್ರಮ ಗೊಳಿಸಿರುವ ಅರ್ಜಿಗಳು</th><th>ತಿರಸ್ಕೃತ ಅರ್ಜಿಗಳು</th><th>ಬಾಕಿ ಇರುವ ಅರ್ಜಿಗಳು</th></tr>
<tr><td>1.</td><td>ಮಡಿಕೇರಿ</td><td>15245</td><td>4715</td><td>5365</td><td>5165</td></tr>
<tr><td>2.</td><td>ವಿರಾಜಪೇಟೆ</td><td>3713</td><td>536</td><td>2159</td><td>1018</td></tr>
<tr><td>3.</td><td>ಪೊನ್ನಂಪೇಟೆ</td><td>5115</td><td>515</td><td>3094</td><td>1506</td></tr>
</table></td></tr>
</table>

| | | | | | |
|---|---|---|---|---|---|
| 4. | ಸೋಮವಾರಪೇಟೆ | 21604 | 2336 | 8218 | 11050 |
| 5. | ಕುಶಾಲನಗರ | 5348 | 1271 | 3316 | 761 |
| **ಒಟ್ಟು** | | **51025** | **9373** | **22152** | **19500** |

| | | |
|---|---|---|
| (ಇ) | ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನುಗಳನ್ನು ಸಿ ಮತ್ತು ಡಿ ಜಮೀನುಗಳೆಂದು ವರ್ಗೀಕರಿಸಿ ಅಂತಹ ಜಮೀನುಗಳನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವಂತೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿರುತ್ತಾರೆಯೇ; ನೀಡಿದ್ದಲ್ಲಿ ಅವುಗಳನ್ನು ಗುರುತಿಸಲು ರೂಪಿಸಿರುವ ನಿಯಮಾವಳಿಗಳೇನು; ಈ ನಿಯಮಾವಳಿಗಳನ್ವಯ ಸದರಿ ಜಮೀನುಗಳನ್ನು ವರ್ಗೀಕರಿಸಲಾಗಿದೆಯೇ? | ಸರ್ಕಾರದ ಸುತ್ತೋಲೆ ಸಂಖ್ಯೆ ಆರ್‌ಡಿ 286 ಎಲ್‌ಜಿಪಿ 1976 ದಿನಾಂಕ:26.08.1977 ರಲ್ಲಿ ಕೃಷಿ ಇಲಾಖೆಯವರು ಸರ್ಕಾರದ ಬೀಳು ಜಮೀನುಗಳನ್ನು ಎ, ಬಿ, ಸಿ ಮತ್ತು ಡಿ ವರ್ಗದ ಜಮೀನುಗಳೆಂದು ವರ್ಗೀಕರಿಸಿದ್ದು, ಈ ಪೈಕಿ ಕೃಷಿಗೆ ಯೋಗ್ಯವಲ್ಲದ ಸಿ & ಡಿ ವರ್ಗದ ಜಮೀನುಗಳನ್ನು ಅರಣ್ಯೀಕರಣದ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಲು ನಿರ್ದೇಶಿಸಿದ ಮೇರೆಗೆ ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಸಂಖ್ಯೆ ಎಲ್‌ಎನ್‌ಡಿ(2)/340/77-78 ದಿನಾಂಕ 25/10/1978 ರಲ್ಲಿ ಸಿ ಮತ್ತು ಡಿ ವರ್ಗದ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಲು ತಿಳಿಸಲಾಗಿರುತ್ತದೆ.<br><br>ಕೆಲವು ಪ್ರದೇಶಗಳನ್ನು ಸಿ ಮತ್ತು ಡಿ ವರ್ಗದ ಜಮೀನುಗಳೆಂದು ವರ್ಗೀಕರಿಸಿರುವುದು ತಪ್ಪಾಗಿರುವುದರಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸುವ ಮೊದಲು ಕೃಷಿಗೆ ಒಳಪಟ್ಟ ಜಮೀನುಗಳನ್ನು ಕಂದಾಯ ಇಲಾಖೆಗೆ ಹಿಂದಿರುಗಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ/106/ಎಲ್‌ಜಿಪಿ/88 ದಿನಾಂಕ 06.07.1988ರಲ್ಲಿ ತಿಳಿಸಲಾಗಿರುತ್ತದೆ.<br><br>ಅಲ್ಲದೇ, ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 106 ಎಲ್‌ಜಿಪಿ 88, ದಿನಾಂಕ:20.07.1994 ರಂತೆ ಸಿ & ಡಿ ವರ್ಗದ ಜಮೀನುಗಳನ್ನು ಅರಣ್ಯ ಇಲಾಖೆಗೆ ಲ್ಯಾಂಡ್ ಬ್ಯಾಂಕ್ ನಿರ್ಮಿಸುವ ಸಲುವಾಗಿ ಷರತ್ತುಗಳ ಮೇರೆಗೆ ವರ್ಗಾವಣೆ ಮಾಡಲಾಗಿರುತ್ತದೆ. |
| (ಈ) | ಜಿಲ್ಲೆಯಲ್ಲಿರುವ ಎಲ್ಲಾ ಪೈಸಾರಿ ಜಮೀನುಗಳನ್ನು ಸರ್ವೆ ಮಾಡಿ ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನುಗಳನ್ನು ಮಾತ್ರ ಅರಣ್ಯ ಇಲಾಖೆಗೆ ವರ್ಗಾಯಿಸುವ ಕುರಿತು ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗುವುದೇ; | ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| (ಉ) | ಅರಣ್ಯ ಇಲಾಖೆಯಿಂದ ಹಸ್ತಾಂತರಗೊಂಡಿರುವ ಹಾಗೂ ಲ್ಯಾಂಡ್ ಬ್ಯಾಂಕ್‌ನಲ್ಲಿ ಉಳಿದಿರುವ ಜಮೀನನ್ನು (ಈ ಹಿಂದಿನ ಪೈಸಾರಿ ಜಮೀನು) ಭೂ ಮಂಜೂರಾತಿ ಕಾಯ್ದೆಯಡಿ ಸಂಬಂಧಿಸಿದವರಿಗೆ ಮಂಜೂರು ಮಾಡಲು ಇರುವ | ಸರ್ಕಾರದ ಪತ್ರ ಸಂಖ್ಯೆ:ಆರ್.ಡಿ 106 ಎಲ್‌ಜಿಪಿ 88, ದಿನಾಂಕ:20.07.1994 ರಂತೆ ಸಾರ್ವಜನಿಕ ಉದ್ದೇಶಕ್ಕಾಗಿ ಹಾಗೂ ಸರ್ಕಾರಕ್ಕೆ ಜಮೀನು ಅಗತ್ಯವಿದ್ದಲ್ಲಿ ಕಂದಾಯ ಇಲಾಖೆಯು ಲ್ಯಾಂಡ್ ಬ್ಯಾಂಕ್ ನಲ್ಲಿರುವ ಜಮೀನುಗಳನ್ನು ವಾಪಸ್ ಪಡೆಯಬಹುದಾಗಿರುತ್ತದೆ. |

| | | |
|---|---|---|
| | ತೊಡಕುಗಳೇನು; ಈ ಬಗ್ಗೆ ಸರ್ಕಾರದ ನಿಲುವೇನು; | |
| (ಊ) | 1991 ರಲ್ಲಿ ಹಿಂಪಡೆಯಲಾದ ಜಮೀನುಗಳು ಎಂಬ ಮಾನದಂಡವನ್ನು ಹೊರತುಪಡಿಸಿ ಸಾಗುವಳಿಗೆ ಯೋಗ್ಯವಾದ ಎಲ್ಲಾ ಜಮೀನುಗಳನ್ನು ನಮೂನೆ-50, 53 ಮತ್ತು 57ರಡಿ ಮಂಜೂರಾತಿ ಮಾಡಿ ಹಕ್ಕುಪತ್ರ ನೀಡುವ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು? | ನಮೂನೆ 50 ಮತ್ತು 53 ರಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಸರ್ಕಾರದ ಪತ್ರ ಸಂಖ್ಯೆ:ಆರ್.ಡಿ 24 ಎಲ್‌ಜಿಪಿ 2017(ಭಾಗ-1) ದಿನಾಂಕ:05.06.2017 ಮತ್ತು 11.08.2017ರ ನಿರ್ದೇಶನಗಳಂತೆ ಹಾಗೂ ಸುತ್ತೋಲೆ ಸಂಖ್ಯೆ: ಆರ್‌ಡಿ 45 ಎಲ್‌ಜಿಪಿ 2023, ದಿನಾಂಕ: 01.12.2023ರ ಮಾರ್ಗಸೂಚಿಗಳಂತೆ ವಿಲೇವಾರಿಗೊಳಿಸಲು ಕ್ರಮವಹಿಸಲಾಗುತ್ತಿದೆ. |

(ಕಡತ ಸಂಖ್ಯೆ:ಆರ್‌ಡಿ 9 ಎಲ್‌ಜಿಓ 2025)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು